ಪಿಡಬ್ಲುಃ 1

ದಿನಾಂಕಃ 16-10-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಯು ಎ ವಕೀಲರಿಂದಃ

2 ನೇ ವಾದಿಯ ವಯಸ್ಸು ಅಂದಾಜು 28-29 ಆಗಿರಬಹುದು. 3 ನೇ ವಾದಿಯು 2 ನೇ ವಾದಿಗಿಂತ 1 ವರೆ ವರ್ಷ ಚಿಕ್ಕವನಿರುತ್ತಾನೆ. ನಾನು ಈಗ ಇರುವ ಮಿರ್ಜಾನ ಗ್ರಾಮದ ಮನೆ ಮತ್ತು ಆಸ್ತಿಯನ್ನು 9-10 ವರ್ಷಗಳ ಹಿಂದೆ ಖರೀದಿ ಮಾಡಿದ್ದೆನು. ನಾನು ಈ ದಾವೆಯಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನನ್ನ ಉದ್ಯೋಗ ಮನೆವಾರ್ತೆ ಎಂದು ಬರೆದಿರುವುದು ಸರಿ ಇದೆ. ನಾನು ಜಾಗವನ್ನು ಖರೀದಿ ಮಾಡಲು ಹಣವನ್ನು ಧರ್ಮಸ್ಥಳ ಸಂಘದಿಂದ ಪಡೆದುಕೊಂಡಿರುತ್ತೇನೆ. ನಾನು ಖರೀದಿ ಮಾಡಿದ ಜಾಗದ ಸರ್ವೆ ನಂಬರ ನನಗೆ ಸರಿಯಾಗಿ ಗೊತ್ತಿಲ್ಲಾ. ನಾನು ಆ ಜಾಗವನ್ನು ಅಂತೋನಿ ಮಿನ್ನಿ ಎಂಬುವರಿಂದ ಖರೀದಿ ಮಾಡಿದ್ದೆನು. ಆ ಖರೀದಿ ದಸ್ತಾವೇಜು ನನ್ನ ಬಳಿ ಇಲ್ಲಾ. ಆ ರೀತಿ ಖರೀದಿ ಮಾಡಿರುವುದು ನನ್ನ ಗಂಡ ಮಿರ್ಜಾನನಲ್ಲಿದ್ದ ಜಾಗವನ್ನು ಮಾರಾಟ ಮಾಡಿದ ನಂತರ ಎಂದರೆ ಸರಿ. ನಾನು ಅಲ್ಲಿಯವರೆಗೆ ಒಬ್ಬ ಕ್ರಿಶ್ಚಿಯನರ ಮನೆಯಲ್ಲಿ ವಾಸ್ತವ್ಯ ಇದ್ದೆ. ಆ ಜಾಗವನ್ನು ನನ್ನ ಗಂಡನೇ ಖರೀದಿ ಮಾಡಿ ನನಗೆ ಕೊಟ್ಟಿದ್ದಾನೆ ಎಂದರೆ ಸರಿ. ನಾನು ವಿಚ್ಛೇದನಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ದಾವಾಸ್ತಿಯಲ್ಲಿ ಬರುವಂತಹ ಪರಿಹಾರದ ಹಣ ನನಗೆ ಬರಬೇಕು ಎಂದು ಕೇಳಿರಲಿಲ್ಲಾ. ಸದರಿ ವಿಚ್ಛೇದನ ಪ್ರಕರಣದಲ್ಲಿ ನನ್ನ ಮಕ್ಕಳು ಸಹ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿಯಲ್ಲಾ. ಅವರಿಗೆ ವಿಚ್ಛೇದನ ಪ್ರಕರಣ ನಡೆಯುತ್ತಿದ ಬಗ್ಗೆ ಗೊತ್ತಿತ್ತು ಎಂದರೆ ಸರಿ. ನಮ್ಮ ಮಕ್ಕಳು ದಾವಾ ಆಸ್ತಿಯ ಪರಿಹಾರ ನಮಗೆ ಬರಬೇಕು ಎಂದು ನನ್ನ ಗಂಡ ಬದುಕಿದ್ದ ಸಮಯದಲ್ಲಿ ಕೇಳಿದ್ದು ಇಲ್ಲಾ. ನನ್ನ ಗಂಡ ಮೃತನಾದ ಬಳಿಕ ವಾರಸಾ ಅರ್ಜಿಯನ್ನು ಕೊಟ್ಟಿದ್ದು ಇರಬಹುದು. ಅದನ್ನು ನಾನೇ ಕೊಟ್ಟಿದ್ದೆ. ಅದರ ಪ್ರತಿ ಇದೆಯಾ ಎಂದು ನನಗೆ ನೆನಪಿಲ್ಲಾ. ದಾವಾ ಪರಿಶಿಷ್ಟದಲ್ಲಿ ತೋರಿಸಿದ ಆಸ್ತಿಗಳು ಕರ್ನಾಟಕ ಸರ್ಕಾರ ದ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲಾ. ನಾನು ಕೊಟ್ಟಿದ್ದ ವಾರಸಾ ಅರ್ಜಿ ಏನಾಗಿದೆ ಎಂದು ನಾನು ತಿಳಿದುಕೊಂಡಿಲ್ಲಾ. ಆ ರೀತಿ ವಾರಸಾ ಅರ್ಜಿಯನ್ನು ಕೊಡಬೇಕಾದರೆ ನನ್ನ ವಿಚ್ಛೇದಿತ ಗಂಡ ವಿಲ್ ನಾಮೆ ಮಾಡಿದ ವಿಷಯ ಗೊತ್ತಿತ್ತು ಎಂದರೆ ನನ್ನ ಗಂಡ ಯಾವುದೇ ವಿಲ್ ಮಾಡಿಲ್ಲಾ. ನನ್ನ ಹೆಸರಿಗೆ ವಾರಸಾ ಮಾಡಲು ಯಾರು ತಕರಾರು ಕೊಟ್ಟಿರಲಿಲ್ಲಾ. ನಾನು ಯಾವುದೇ ವಾರಸಾ ಅರ್ಜಿ ಕೊಟ್ಟಿಲ್ಲಾ ಎಂದರೆ ನಾನು ನಮ್ಮ ವಕೀಲರ ಹತ್ತಿರ ಬರೆದುಕೊಟ್ಟಿದ್ದೆನು. ನನಗೆ ನನ್ನ ಗಂಡ ಮೃತಪಟ್ಟಿದ್ದು ಗೊತ್ತಿರಲಿಲ್ಲಾ ಎಂದರೆ ಸರಿಯಲ್ಲಾ. ನನ್ನ ಗಂಡ ಮೃತಪಟ್ಟ ನಂತರ ಶಿವಾನಂದ ನಾರಾಯಣ ನಾಯ್ಕ ಮುಂದಾಗಿ ಕ್ರಿಯಾ ಕರ್ಮ ಮಾಡಿದ್ದಾರೆ ಎಂದರೆ ಸರಿಯಲ್ಲಾ. ನಾವು ಯಾರ ಮೂಲಕ ಕ್ರಿಯಾಕರ್ಮ ಮಾಡಿಸಿದ್ದೇವೆ ಅವರ ಸಾಕ್ಷಿ ಮಾಡಿಸಲು ನನಗೆ ತೊಂದರೆ ಇಲ್ಲಾ ಎಂದರೆ ಸರಿ.

2. ಮಿರ್ಜಾನ ಗ್ರಾಮದ ಆಸ್ತಿಯನ್ನು ಖರೀದಿ ಮಾಡುವಾಗ ನನ್ನ ಮಕ್ಕಳು ಕನ್ನಡ ಶಾಲೆಗೆ ಹೋಗುತ್ತಿದ್ದರು. ಆ ಸಮಯುದಲ್ಲಿ ಧರ್ಮಸ್ಥಳ ಸಂಘ ಇರಲಿಲ್ಲಾ ಎಂದರೆ ಸರಿಯಲ್ಲಾ. ನಾನು ಸಂಘದಿಂದ ಸಾಲ ತೆಗೆದುಕೊಳ್ಳುವಾಗ



ಜಾಗವನ್ನು ಖರೀದಿ ಮಾಡಲು ಎಂದು ಬರೆಸಿ ತೆಗೆದುಕೊಂಡಿದ್ದೇನೆ. ಆ ದಾಖಲೆಯನ್ನು ಈವರೆಗೂ ಹಾಜರಪಡಿಸಿಲ್ಲಾ ಎಂದರೆ ಸರಿ. ಮಿರ್ಜಾನ ಗ್ರಾಮದ ಆಸ್ತಿಯನ್ನು ಖರೀದಿ ಮಾಡಿದ ನಂತರ ಮನೆ ಕಟ್ಟಿಸಿರುತ್ತೇನೆ ಎಂದರೆ 5-6 ವರ್ಷಗಳ ನಂತರ ಕಟ್ಟಿಸಿರುತ್ತೇನೆ. ದಾವೆಯಲ್ಲಿ 2 ಮತ್ತು 3 ನೇ ವಾದಿಯರು ಏನು ಉದ್ಯೋಗ ಮಾಡುತ್ತಾರೆ ಎಂದು ಬರೆಸಲು ತೊಂದರೆ ಇರಲಿಲ್ಲಾ ಎಂದರೆ ಸರಿ. ನಾನು ಇರುವಂತ ಜಾಗವನ್ನು ಖರೀದಿ ಮಾಡಿದ್ದು ಮತ್ತು ಮನೆಯನ್ನು ಕಟ್ಟಿಸಿದ್ದು ನನ್ನ ವಿಚ್ಚೇದಿತ ಗಂಡ ಎಂದರೆ ಸರಿಯಲ್ಲಾ. ನನ್ನ ಹೆಸರಿಗೆ ಮತ್ತು ಮತ್ತು ಆಸ್ತಿ ಆದ ನಂತರ ನನಗೆ ವಿಚ್ಚೇದನ ಆಗಿದೆ ಎಂದರೆ ಸರಿ. ನನ್ನ ಗಂಡ ನನಗೆ ಜಾಗ ಖರೀದಿಸಿ ಮನೆ ಕಟ್ಟಿಸಿ ಕೊಟ್ಟು ಸಂಸಾರಕ್ಕೆ ಬೇಕಾದ ಎಲ್ಲಾ ಸಾಮಾನುಗಳನ್ನು ತೆಗೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲಾ. ನಾನು ಮತ್ತು ನನ್ನ ಮಕ್ಕಳು ನನ್ನ ವಿಚ್ಚೇದಿತ ಗಂಡನನ್ನು ನೋಡಿಕೊಳ್ಳದೇ ಇದ್ದ ಕಾರಣ ದಿನಾಂಕ 11-9-2012 ರಂದು 2 ನೇ ಪ್ರತಿವಾದಿಯ ಹೆಸರಿಗೆ ನೊಂದಾಯಿತ ವಿಲ್ ನಾಮೆ ಮಾಡಿದ್ದಾರೆ ಎಂದರೆ ಸರಿಯಲ್ಲಾ. 2 ನೇ ಪ್ರತಿವಾದಿಯೇ ನನ್ನ ಗಂಡನ ಅಂತಿಮ ಇಚ್ಚೆಯಂತೆ ಗೋಕರ್ಣದಲ್ಲಿ ಕ್ರಿಯಾಕರ್ಮ ಮಾಡಿದ್ದಾನೆ ಎಂದರೆ ಸರಿಯಲ್ಲಾ. ನಾವು ವಾದಿಯರು ಯಾವುದೇ ನೈತಿಕ ಮತ್ತು ಕಾನೂನು ಬದ್ಧ ಹೊಣೆಗಾರಿಕೆ ಮಾಡದೇ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲಾ. ದಾವೆಯಲ್ಲಿ ಬರೆದ ಎಲ್ಲಾ ವಿಷಯಗಳು ಸುಳ್ಳು ಇದೆ ಎಂದರೆ ಸರಿಯಲ್ಲಾ. ನನ್ನ ವಿಚ್ಚೇದಿತ ಗಂಡ ಅವರ ಅಂತಿಮ ಇಚ್ಚೆಯನ್ನು ವಿಲ್ ನಲ್ಲಿ ಬರೆದಿದ್ದಾರೆ ಎಂದರೆ ಸರಿಯಲ್ಲಾ.

<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಆರ್ ಜಿ ಎನ್ ವಕೀಲರಿಂದಃ</u>

ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಕುಮಟಾ.